## ಮಾಲಿನ್ಯ ನಗರಿ

ನಮ್ಮ ನೆಲದಲ್ಲಿದ್ದ ಚಿನ್ನದ ನಿಕ್ಷೇಪಗಳನ್ನು ಬ್ರಿಟಿಷರು ನಮ್ಮವರ ಶ್ರಮದಿಂದಲೇ ಹೊರತೆಗೆದು ಹೊತ್ತೊಯ್ದರು. ಈಗ ಕೆ.ಜಿ.ಎಫ್.ನಲ್ಲಿ ನಿಕ್ಷೇಪಗಳು ತಗ್ಗಿವೆ. ಜೊತೆಗೆ ಮಾಲಿನ್ಯವೂ ಹೆಚ್ಚಾಗಿವೆ.

ಕೆ.ಜಿ.ಎ.ಫ್. ತುಂಬಾ ಹರಡಿರುವ ಸೈನೈಡ್ ಗುಡ್ಡಗಳಿಂದ ಆಗುತ್ತಿರುವ ಮಾಲಿನ್ಯ ನಾನಾ ಬಗೆ, ಅದರ ಮೇಲಿಂದ ಬರುವ ಧೂಳು ಒಂದೆಡೆಯಾದರೆ ಮಳೆಗಾಲದಲ್ಲಿ ಅಲ್ಲಿಂದ ಬರುವ ನೀರು ಕೆರೆ ಬಾವಿಗಳಲ್ಲಿ ಮಾಲಿನ್ಯವನ್ನು ಹೆಚ್ಚಿಸುತ್ತಲೇ ಇರುವುದು ಈಗಲೂ ಇರುವ ವಿದ್ಯಮಾನ.

ನೂರು ವರ್ಷಗಳಿಂದ ಹರಿದು ಬಂದ ಕೆರೆನೀರು ರಾಡಿಯಾಗಿದ್ದು ಬೆಳೆಗಳಿಗೂ ಉಪಯೋಗವಾಗುತ್ತಿಲ್ಲ. ಆ ನೀರಿನಲ್ಲಿ ಕಪ್ಪೆ ಹಾವುಗಳೂ ಬದುಕುತ್ತಿಲ್ಲ. ಮಲಿನದಿಂದ ಇಡೀ ಪರಿಸರವೇ ಹಾಳಾಗಿದ್ದು ಇದು ದುರಸ್ತಿಯಾಗುವುದೂ ದೂರದ ಮಾತು.

ಸ್ವಯಂ ನಿವೃತ್ತಿ ಘೋಷಣೆಯ ಬಳಿಕ ಸಾವಿರಾರು ಕಾರ್ಮಿಕರು ನಿವೃತ್ತರಾದರೂ ಅವರಿಗೆ ಬರಬೇಕಾದ ನಿವೃತ್ತಿ ಸೌಲಭ್ಯಗಳು ಬರಲಿಲ್ಲ. ಕೊನೆಗೆ 2001 ರಲ್ಲಿ ಕೆ.ಜಿ.ಎಫ್. ಗಣಿಗಳನ್ನು ಸ್ಥಗಿತ ಗೊಳಿಸುವ ನಿರ್ಧಾರಕ್ಕೆ ಬಂತು ಕೇಂದ್ರ ಸರ್ಕಾರ.

ಒಟ್ಟಾರೆ 1700 ಕೋಟಿ ರೂಪಾಯಿಗಳ ಸಾಲದಲ್ಲಿರುವ ಬಿ.ಜಿ.ಎಂ.ಎಲ್. ಗಣಿ ಮುಚ್ಚಿದಾಗ ಕಾರ್ಮಿಕರಿಗೆ ಬಾಕಿ ಉಳಿಸಿಕೊಂಡಿದ್ದ 32 ಕೋಟಿ ರೂ.ಗಳನ್ನು ಕೊಡಲಾಗಲಿಲ್ಲ. ಇದಕ್ಕಾಗಿ ನ್ಯಾಯಾಲಯಗಳಲ್ಲಿ ಕಟ್ಲೆ ದಾಖಲಾದವು. ಕಳೆದ 17 ವರ್ಷಗಳಿಂದ ಎಷ್ಟೋ ಹೋರಾಟಗಳು ಕೆ.ಜಿ.ಎಫ್. ನಲ್ಲಿ ನಡೆದಿವೆ. ಕೇಂದ್ರ ಸರ್ಕಾರ ಬಿಜಿಎಂಎಲ್ ಆಸ್ತಿಗಳಿಗೆ ಬೆಲೆ ಕಟ್ಟಲು ನಿರ್ಧರಿಸಿತು. ಅದು ಈಡೇರಲಿಲ್ಲ. ಕೋರ್ಟ್ ಮಧ್ಯ ಪ್ರವೇಶ ಮಾಡಿ ಸರ್ಕಾರವೇ ಗಣಿಗಳನ್ನು ನಡೆಸಲು ಮುಂದಾಗಬೇಕೆಂಬ ಅಭಿಪ್ರಾಯ ನೀಡಿತು. ಗಣಿ ಆಸ್ತಿಯನ್ನು ಹರಾಜು ಮಾಡುವುದು ಸರಿಯಾದ ಕ್ರಮವಲ್ಲವೆಂಬ ಮಾತೂ ಬಂತು. ಈ ನಡುವೆ ಕೇಂದ್ರ ಸರ್ಕಾರ ಕೋರಿಕೆಯನ್ನು ಪುರಸ್ಕರಿಸಿದ ಸುಪ್ರೀಂಕೋರ್ಟ್ ಜಾಗತಿಕ ಟೆಂಡರ್ ಪ್ರಕ್ರಿಯೆಗೆ ಅನುಮತಿ ಕೊಟ್ಟಿತು.

2016 ರಲ್ಲಿ ತಜ್ಞರ ವರದಿಯನ್ನು ಪರಿಶೀಲಿಸಿದ ಕೇಂದ್ರ ಸರ್ಕಾರ ಕೋಲಾರ ಚಿನ್ನದ ಗಣಿಗಳನ್ನು ಪುನರಾರಂಭಿಸುವುದಾಗಿ ಘೋಷಣೆ ಮಾಡಿದಾಗ ಗಣಿ ಕಾರ್ಮಿಕರು– ಅವರ ಕುಟುಂಬಗಳಲ್ಲಿ ಕೊಂಚ ಆಸೆ ಚಿಗುರಿತು.

ಗಣಿ ಕಾರ್ಮಿಕರ ಹಿತರಕ್ಷಣೆಗೆಂದು ಕೆ.ಜಿ.ಎಫ್. ಗಣಿ ಪ್ರದೇಶದಲ್ಲಿ ಅಸ್ತಿತ್ವ ಪಡೆದುಕೊಂಡ 20ಕ್ಕೂ ಹೆಚ್ಚು ಕಾರ್ಮಿಕ ಸಂಘಟನೆಗಳು ಮನವಿ, ಆಗ್ರಹ, ಬಂದ್ ಹೋರಾಟ, ಕಾನೂನು ಹೋರಾಟದಲ್ಲಿ ನಿರತರಾಗಿದ್ದರೂ ಅದಾವುದೂ ಈವರೆಗೆ ದಡ ಕಂಡಂತಿಲ್ಲ.

ನೆಲದೊಳಗಿನಿಂದ ಅದಿರುಕಲ್ಲು ಹೊರತಂದು ಅದನ್ನು ಪುಡಿಮಾಡಿ ಮಣ್ಣಿನಿಂದ ಚಿನ್ನದ ಅಂಶ ಬೇರ್ಪಡಿಸಲು ಸೈನೈಡ್ ರಾಸಾಯನಿಕವನ್ನು ಉಪಯೋಗಿಸುವುದು ಸಾಮಾನ್ಯ. ಚಿನ್ನದ ಅಂಶ ಪಡೆದು ಉಳಿದ ಮಣ್ಣನ್ನು ಗಣಿಗಳ ಆಸುಪಾಸಿನಲ್ಲಿ ಗುಡ್ಡೆಹಾಕಲು ಶುರುಮಾಡಿದ್ದು ನೂರು ವರ್ಷಗಳ ಹಿಂದೆ. ಆ ದಿಬ್ಬಗಳು ಕೆ.ಜಿ.ಎಫ್. ನಗರದ ಸುತ್ತಮುತ್ತಲೂ ಹರಡಿವೆ. ಈ ದಿಬ್ಬದ ಮಣ್ಣಿನಲ್ಲಿ ಚಿನ್ನದ ಅಂಶ ಇದೆ ಎಂಬುದು ಹಿಂದೆ ಗೊತ್ತಾಗಿದ್ದರೂ ಅದರತ್ತ ಯಾರೂ ಗಮನಿಸಿರಲಿಲ್ಲ. ಆಸ್ಟ್ರೇಲಿಯಾದ ಕಂಪನಿಯೊಂದು ಇದನ್ನೇ ಬಂಡವಾಳ ಮಾಡಿಕೊಂಡು ಚಿನ್ನ ಉತ್ಪಾದಿಸುವ ಮಾತು ಆಡಿತಾದರೂ ಇದು ಜಾರಿಗೆ ಬರಲಿಲ್ಲ. ಇದರ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತಜ್ಞರನ್ನು ಕಳುಹಿಸಿ ಸನೈಡ್ ಡಂಪ್ಸ್‌ನಿಂದ ಸಿಗಬಹುದಾದ ಚಿನ್ನದ ಅಂಶದ ಮಾಹಿತಿ ಕಲೆಹಾಕಿತು. ಆಗ ಬೆಳಕಿಗೆ ಬಂದಿದ್ದು ಸುಲಭ ತಂತ್ರಜ್ಞಾನ ಉಪಯೋಗದಿಂದ ಪ್ರತಿ ಟನ್‌ನಿಂದಲೂ ಒಂದು ಗ್ರಾಮ್ ಚಿನ್ನ ಪಡೆಯಬಹುದೆಂಬ ಅಂಶ.

ಕೆ.ಜಿ.ಎಫ್. ನಲ್ಲಿ ಪಿರಮಿಡ್ಡುಗಳಂತೆ ಕಾಣುವ ಸೈನೈಡ್ ಮಣ್ಣು 31 ದಶಲಕ್ಷ ಟನ್‌ಗಳಷ್ಟಿದೆ. ಇದರಿಂದಲೇ 25 ಸಾವಿರ ಕೋಟಿ ರೂ.ಗಳು ಸಿಗಬಹುದೆಂಬ ಅಂದಾಜು ಮಾಡಿರುವ ಕೇಂದ್ರ ಸರ್ಕಾರ ಇನ್ನೆಲ್ಲಾದರೂ ನಿಕ್ಷೇಪಗಳು ಉಳಿದಿರಬಹುದೇ ಎಂಬುದನ್ನು ಪತ್ತೆಹಚ್ಚಲು ಮಿನರಲ್ ಎಕ್ಸ್‌ಪ್ಲೋರೇಷನ್ ಕಾರ್ಪೋರೇಷನ್‌ಗೆ ಸೂಚಿಸಿದೆ.

ಕೋಲಾರದ ಚಿನ್ನದ ಗಣಿಗಳಲ್ಲಿ ಉತ್ತರ– ದಕ್ಷಿಣವಾಗಿ ಚಿನ್ನದ ಪದರುಗಳು ಅಡಗಿವೆ. ಇವು ಸುಮಾರು ಎಂಟು ಕಿಲೋಮೀಟರ್ ಉದ್ದಕ್ಕೂ ಹೋಗಿವೆ. ಇದೇ ಭೂಮಿಯ ಕೆಳಗೆ ಈವರೆಗೂ ಗಣಿಗಾರಿಕೆ ನಡೆದಿದ್ದು. ಬುಲ್ಲೇನ್, ಚಾಂಪಿಯನ್ ಎಡ್ಲರ್ ಮೊದಲಾದ ಷಾಪ್‌ಗಳಿರುವುದೇ ಇಲ್ಲಿ. ಚಿನ್ನದ ಪದರುಗಳಲ್ಲಿ ಚಿನ್ನ ಸಿಗುವುದು ಖಚಿತವಾದರೂ ಆಧುನಿಕ ತಂತ್ರಜ್ಞಾನವನ್ನು ಹೊಂದಿಲ್ಲದಿದ್ದ ಬಿಜಿಎಂಎಲ್ ಸುಮ್ಮನೆ ಕೈಚೆಲ್ಲಿತೆಂದು ಹೇಳಲಾಗುತ್ತಿದೆ.

ಗಣಿಗಳಲ್ಲಿ ಕಾರ್ಯಾಚರಣೆ ನಿಲ್ಲಿಸಿದಾಗ ಪರಿಸ್ಥಿತಿ ವ್ಯತಿರಿಕ್ತವಾಗಿತ್ತೆಂಬುದು ಹೇಳಬಹುದಾದರೂ ಪ್ರಸಕ್ತ ಸ್ಥಿತಿಯಲ್ಲಿ ನಮ್ಮ ದೇಶಕ್ಕೆ ಚಿನ್ನದ ಗಣಿಗಾರಿಕೆಗೆ ಇಳಿಯಬೇಕಾದ ಅನಿವಾರ್ಯತೆ ಇರುವುದಂತೂ ಸ್ಪಷ್ಟ. ಹೀಗಾಗಿ ಕೇಂದ್ರ ಸರ್ಕಾರ ಆಧುನಿಕ ಗಣಿ ಸೌಲಭ್ಯಗಳನ್ನು ಪರಿಶೀಲಿಸುವ ದಿಸೆಯಲ್ಲೂ ಹೆಜ್ಜೆ ಇಟ್ಟಿದೆ. ಇತ್ತ ಎಂ.ಸಿ.ಇ. ತಜ್ಞರು ಕೆ.ಜಿ.ಎಫ್. ನಲ್ಲಿ ಪತ್ತೆ ಕಾರ್ಯಕ್ಕೆ ಇಳಿದಿದ್ದಾರೆ. ಸೈನೈಡ್ ದಿಬ್ಬದ ಮಣ್ಣಿನಲ್ಲಿ ಟನ್‌ಗೆ 0.25 ಗ್ರಾಂ ಚಿನ್ನ ಸಿಗಬಹುದೆಂಬ ಅಂದಾಜು ಮಾಡಿರುವ ಅವರು ಈವರೆಗೆ ಚಿನ್ನದ ಗಣಿಗಳು ಕಾರ್ಯ ನಿರ್ವಹಿಸುತ್ತಿದ್ದ 8 ಕಿಲೋಮೀಟರ್ ಉತ್ತರ–ದಕ್ಷಿಣ ದಿಕ್ಕು ಬಿಟ್ಟು ಪೂರ್ವ–ಪಶ್ಚಿಮವಾಗಿ ಇರುವ ನೆಲದಲ್ಲೂ ನಿಕ್ಷೇಪದ ಕುರುಹುಗಳನ್ನು ಗಮನಿಸಿದ್ದಾರೆ.

ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಗಣಿಗಳಲ್ಲಿ ಈಗ ನೀರು ತುಂಬಿಹೋಗಿದೆ. ಅದನ್ನು ಹೊರ ತೆಗೆಯುವುದು, ಅಲ್ಲಿಯೇ ಗಣಿಗಾರಿಕೆ ಶುರು ಮಾಡುವುದು ಕಷ್ಟದ ಹಾಗೂ ಅಪಾಯದ ಕೆಲಸವೆಂಬುದು ತಿಳಿದಿರುವ ವಿಚಾರ. ಆದ್ದರಿಂದಲೇ ಸೈನೈಡ್ ದಿಬ್ಬಗಳಲ್ಲಿ ಸಂಸ್ಕರಣೆ ಮಾಡಿ ಚಿನ್ನ ಉತ್ಪಾದಿಸುವುದರ ಜೊತೆಗೆ ಹೊಸ ನಿಕ್ಷೇಪಗಳಲ್ಲಿ ಚಿನ್ನ ಉತ್ಪಾದಿಸಲು ಸುಧಾರಿತ ಮಾರ್ಗಗಳನ್ನು ಅನುಸರಿಸುವ ಯೋಚನೆಯನ್ನು ಮಾಡಬಹುದಾಗಿದೆ.

ತೈಲದ ನಂತರ ಹೊರದೇಶಗಳಿಂದ ಅತಿ ಹೆಚ್ಚು ಆಮದು ಮಾಡಿಕೊಳ್ಳುವ ಚಿನ್ನದಿಂದ ವಿದೇಶಿ ವಿನಿಮಯ ಅಧಿಕವಾಗಿರುವುದನ್ನು ತಗ್ಗಿಸಲು ನಮ್ಮ ದೇಶದಲ್ಲಿರುವ ನಿಕ್ಷೇಪಗಳಿಂದಲೇ ಚಿನ್ನ ಉತ್ಪಾದಿಸುವ ನಿರ್ಧಾರ ಕೈಗೊಂಡ ಕೇಂದ್ರ ಸರ್ಕಾರ ಕೆ.ಜಿ.ಎಫ್. ಗಣಿಗಳಿಗೆ ಮರು ಜೀವ ನೀಡಲು ಮುಂದಾಗಿದೆ.

ಎಸ್.ಬಿ.ಐ. ಕ್ಯಾಪಿಟಲ್‌ನಿಂದ ಬಿ.ಜಿ.ಎಂ.ಎಲ್.ಗೆ ಬಂಡವಾಳ ಒದಗಿಸಲು ಕೇಂದ್ರ ಸರ್ಕಾರದ ಗಣಿ ಇಲಾಖೆ ಈಗಾಗಲೇ ಸೂಚಿಸಿದ್ದು ಜುಲೈ ವೇಳೆಗೆ ಎಂ.ಇ.ಸಿ. ವರದಿ ನೀಡಿದ ಬಳಿಕ ಕೇಂದ್ರ ಸಚಿವ ಸಂಪುಟ ಇದಕ್ಕೆ ಹಸಿರು ನಿಶಾನೆ ನೀಡಬಹುದೆಂದ ನಿರೀಕ್ಷೆ ಇದೆ.

